ಪ್ರಮಾಣಪತ್ರಕ್ಕೆ ಲಗತ್ತು

ದಿನಾಂಕ**: 11.02.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯಿತು**.**

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎಸ್ ಎನ್ ಸಿ ವಕೀಲರಿಂದಃ-

ನಾನು ಈ ದಾವೆಯನ್ನು ವೆಂಕಟೇಶಪ್ಪ ಮತ್ತು ರಾಮಪ್ಪ ಎಂಬುವರ ಮೇಲೆ ಹೂಡಿದ್ದೇನೆ. ದಾವಾ ಸ್ವತ್ತಿನ ಸ.ನಂ.**11** ಆಗಿರುತ್ತದೆ. ಸ.ನಂ.**11** ರ ವಿಸ್ತೀರ್ಣ **1** ವರೆ ಎಕರೆ ಇರುತ್ತದೆ. ನಾನು ಈ ದಾವೆಯನ್ನು **08** ವರೆ ಗುಂಟೆಗೆ ಸಂಬಂದಪಟ್ಟಂತೆ ಹೂಡಿರುತ್ತೇನೆ. ಒಂದೂವರೆ ಎಕರೆ ಜಮೀನಿನಲ್ಲಿ ವೆಂಕಟೇಶಪ್ಪ, ರಾಮಪ್ಪ, ನಾರಾಯಣಸ್ವಾಮಪ್ಪ ರವರು ಇದ್ದಾರೆ. ನಾನು ದಾವೆ ಹೂಡಿರುವ **08** ವರೆ ಗುಂಟೆ ಜಮೀನಿನ ಚಕ್ಕುಬಂದಿ ಪೂಃ ಇದೇ ನಂಬರಿಗನ ನಮ್ಮದೇ ಸ್ವತ್ತು, ಪಃಖಾಲಿ ಜಾಗ, ಉಃರಾಮಚಂದ್ರಪ್ಪ, ದಃನಾರಾಯಣಸ್ವಾಮಿ ಹಾಗೂ ವೆಂಕಟೇಶಪ್ಪನವರ ಸ್ವತ್ತು ಇರುತ್ತದೆ. ಪ್ರತಿವಾದಿಯರು ನನ್ನ ಜಮೀನಿನಲ್ಲಿ ಗಲಾಟೆ ಮಾಡಿದ್ದರಿಂದ ನಾನು ಈ ದಾವೆಯನ್ನು ಅವರ ಮೇಲೆ ಹೂಡಿದ್ದೇನೆ. ಯಾವ ದಿನಾಂಕ ತಿಂಗಳು ಹಾಗೂ ವರ್ಷದಂದು ಪ್ರತಿವಾದಿಯರು ಗಲಾಟೆ ಮಾಡಿದ್ದರು ಎಂದು ಹೇಳಲಾಗುವುದಿಲ್ಲ. ಸದರಿ ದಿನಾಂಕ ತಿಂಗಳು ಹಾಗೂ ವರ್ಷವನ್ನು ನನ್ನ ದಾವೆಯಲ್ಲಿಯೂ ನಾನು ಹೇಳಿರುವುದಿಲ್ಲ. **1** ನೇ ಪ್ರತಿವಾದಿ ಅವರ ಪ್ರತಿವಾದ ಪತ್ರದಲ್ಲಿ ಯಾವ ಚೆಕ್ಕುಬಂದಿ ಹೇಳಿದ್ದಾರೆಂದು ನಾನು ತಿಳಿದುಕೊಂಡಿಲ್ಲ.

**(**ಮುಂದುವರಿದ ಪಾಟೀ ಸವಾಲಿಗೆ **ಪ್ರತಿವಾದಿ ಪರ ವಕೀಲರು ಹಾಜರಿದ್ದು ಕಾಲಾವಕಾಶ ಕೋರಿದ್ದು, ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.)**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಇದೆ.
ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶಿಡ್ಲಘಟ್ಟ.